



ಸುದ್ದಿ ಸಂಚಯ

# ಚೆನ್ನೈ ರಾಮಕೃಷ್ಣ ಮಠದ ೧೨೫ನೇ ವಾರ್ಷಿಕೋತ್ಸವ

**ಚೆ**ನ್ನೈ ರಾಮಕೃಷ್ಣ ಮಠದ ೧೨೫ನೇ ವಾರ್ಷಿಕೋತ್ಸವವು ಮಾರ್ಚ್ ೨೫, ೨೬ರಂದು ನಡೆಯಿತು. ಉದ್ಘಾಟನಾ ಸಮಾರಂಭದಲ್ಲಿ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರೂ ಚೆನ್ನೈ ಮಠದ ಅಧ್ಯಕ್ಷರೂ ಆದ ಶ್ರೀಮತ್ ಸ್ವಾಮಿ ಗೌತಮಾನಂದಜಿಯವರು ಸಮಾರಂಭವನ್ನು ಉದ್ಘಾಟಿಸಿ, ಆಶೀರ್ವಚನ ನೀಡಿದರು. ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದಜಿ ಭಾಗವಹಿಸಿ, ಸಭೆಯನ್ನುದ್ದೇಶಿಸಿ ಮಾತನಾಡುತ್ತ, 'ಶ್ರೀರಾಮಕೃಷ್ಣರ ಶಾಶ್ವತ ಕರೆ' ಎಂಬ ವಿಶೇಷ ಭಾಷಣ ಮಾಡಿದರು.

ಮಾರ್ಚ್ ೨೫ರಂದು ವೇದಘೋಷ ಹಾಗೂ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಗಳು ಆರಂಭಗೊಂಡವು. ಹಲವು ಮಂದಿ ಭಕ್ತರು, ಹಿತೈಷಿಗಳು, ಗಣ್ಯರು ಹಾಗೂ ಪ್ರಸಿದ್ಧ ವ್ಯಕ್ತಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಇವರಲ್ಲಿ ಪದ್ಮಶ್ರೀ ನಲ್ಲಿ ಕುಪ್ಪುಸ್ವಾಮಿ ಚೆಟ್ಟಿಯಾರ್, ಲೆಕ್ಕಪರಿಶೋಧಕರಾದ ಶ್ರೀ ಶಿವಕುಮಾರ್, ಬಿ.ಪಿ.ಸಿ.ಎಲ್.ನ ಅಧ್ಯಕ್ಷರಾಗಿದ್ದ ಶ್ರೀ ವರದರಾಜನ್, ಭಾರತೀಯ ವಿದ್ಯಾಭವನದ ನಿರ್ದೇಶಕರಾದ ಕೆ.ಎನ್.ರಾಮಸ್ವಾಮಿ, ಚೆನ್ನೈ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎಲ್.ಎಸ್.ಸತ್ಯಮೂರ್ತಿ, ಮುಂತಾದವರು ಪ್ರಮುಖರು. ರಾಮಕೃಷ್ಣ ಮಿಷನ್ ವಿದ್ಯಾಪೀಠ, ಚೆನ್ನೈ ಇದರ ಅಧ್ಯಕ್ಷರಾದ ಸ್ವಾಮಿ ಶುಕದೇವಾನಂದಜಿ, ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಅಭಿನಂದನಾ ಭಾಷಣ ಮಾಡಿದರು.

ಕಾರ್ಯಕ್ರಮದಲ್ಲಿ ನಡೆದ ಎರಡನೇ ಗೋಷ್ಠಿಯ ಮೊದಲಿಗೆ ಸ್ವಾಮಿ ಶಂಕರಾತ್ಮಾನಂಜಿಯವರು ಭಜನೆಯನ್ನು ನಡೆಸಿಕೊಟ್ಟರು. ಬಳಿಕ ಅದ್ವೈತ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಶುದ್ಧಿದಾನಂದಜಿ, ದೆಹಲಿ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಶಾಂತಾತ್ಮಾನಂದಜಿ, ಹೈದರಾಬಾದ್ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಬೋಧಮಯಾನಂದಜಿ ಇವರು ವಿಶೇಷ ಭಾಷಣ ಮಾಡಿದರು. ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಮಾರ್ಚ್ ೨೬ರಂದು ನಡೆದ ಕಾರ್ಯಕ್ರಮದಲ್ಲಿ ವೇದಘೋಷ, ಹರಿಕಥೆಗಳು ನಡೆದವು. ಬಳಿಕ ವಿವಿಧ ಸಾಂಪ್ರದಾಯಿಕ ಮಠಗಳ ಸಂನ್ಯಾಸಿಗಳ ಸಭೆ ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಶ್ರೀಮತಿ ವಿಶಾಖಾ ಹರಿ ಅವರಿಂದ ದಿವ್ಯತ್ರಯರ ಜೀವನವನ್ನು ಕುರಿತಂತೆ ಹರಿಕಥೆ ಕಾರ್ಯಕ್ರಮ ನಡೆಯಿತು.

ವಾರ್ಷಿಕೋತ್ಸವದ ಅಂಗವಾಗಿ ಭಾರತದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಏಪ್ರಿಲ್ ೮ರಂದು ಸ್ವಾಮಿ ವಿವೇಕಾನಂದರು ೧೮೯೭ರಲ್ಲಿ ೯ ದಿನಗಳ ಕಾಲ ತಂಗಿದ್ದ 'ವಿವೇಕಾನಂದ ಇಲ್ಲಂ'ಗೆ ಭೇಟಿಕೊಟ್ಟರು. ಸ್ವಾಮೀಜಿಯವರಿಗೆ ಪುಷ್ಪಾಂಜಲಿ ಸಲ್ಲಿಸಿದ ಬಳಿಕ ಅವರು ಮಂದಿರದಲ್ಲಿ ಸ್ವಲ್ಪ ಹೊತ್ತು ಧ್ಯಾನಿಸಿದರು. ಮಠದ ಸಂನ್ಯಾಸಿ ವೃಂದ ಹಾಗೂ ಇತರರನ್ನು ಉದ್ದೇಶಿಸಿ ಅವರು ಮಾತನಾಡಿದರು. ಉಪಾಧ್ಯಕ್ಷರೂ ಚೆನ್ನೈ ಮಠದ ಅಧ್ಯಕ್ಷರೂ ಆದ ಶ್ರೀಮತ್ ಸ್ವಾಮಿ ಗೌತಮಾನಂದಜಿ, ತಮಿಳುನಾಡು ರಾಜ್ಯಪಾಲರಾದ ಶ್ರೀ ಆರ್.ಎನ್.ವಿ. ರವಿ, ಕೇದ್ರ ಸಚಿವ ಶ್ರೀ ಎಲ್. ಮುರುಗನ್, ತಮಿಳುನಾಡು ಸರಕಾರದ ಉದ್ದಿಮೆ ಸಚಿವರಾದ ಶ್ರೀ ತಂಗಂ ತೆನ್ನರಸು, ಸ್ವಾಮಿ ಮುಕ್ತಿದಾನದಂದಜಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.







Managing Editor : Swami Muktidananda
Editor : Swami Jnanayogananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020